# ಭಗವದ್ ಸ್ವರೂಪ



❁ ಭಗವಂತ ಭಕ್ತನಿಗೆ ಯಾವ ರೂಪದಿಂದ ಕಾಣಿಸಿಕೊಳ್ಳುತ್ತಾನೋ, ಭಕ್ತ ಆ ರೂಪದ ಸಂಬಂಧವಾಗಿಯೇ ಭಾವಿಸುತ್ತಾನೆ. ವಾಸ್ತವಿಕವಾಗಿ ಯಾವ ಗೊಂದಲವೂ ಇಲ್ಲ. ಹೇಗಾದರೂ ಮಾಡಿ ಆತನ ಸಾಕ್ಷಾತ್ಕಾರ ಪಡೆದುಕೊಂಡುಬಿಟ್ಟಿದ್ದೇ ಆದರೆ ಬಳಿಕ ಆತ ಎಲ್ಲವನ್ನೂ ತಿಳಿಸಿಕೊಟ್ಟು ಬಿಡುತ್ತಾನೆ. ಆ ಕಡೆಗೆ ನೀನು ಇನ್ನೂ ಒಂದು ಹೆಜ್ಜೆಯನ್ನು ಹಾಕಿಯೇ ಇಲ್ಲ – ಅಂಥಾದ್ದರಲ್ಲಿ ಭಗವಂತನ ಸಂಬಂಧವಾಗಿ ಎಲ್ಲವನ್ನೂ ತಿಳಿದುಕೊಂಡು ಬಿಡಲು ಹೇಗೆ ಸಾಧ್ಯ?

❁ ಯಾರು ಸರ್ವದಾ ಭಗವಚ್ಚಿಂತನೆ ಮಾಡುತ್ತಾ ಇರುತ್ತಾರೋ ಆತನಿಗೆ ಗೊತ್ತಾಗುತ್ತದೆ ಆತನ ನಿಜಸ್ವರೂಪ ಏನು ಎಂಬುದು. ಆತನಿಗೆ ಮಾತ್ರವೇ ಕೇವಲ ಗೊತ್ತಿರುತ್ತದೆ, ಭಗವಂತ ನಾನಾ ರೂಪಗಳಿಂದ, ನಾನಾ ಭಾವಗಳಿಂದ ಕಾಣಿಸಿಕೊಳ್ಳುತ್ತಾನೆ – ಆತ ಸಗುಣನೂ ಹೌದು, ನಿರ್ಗುಣನೂ ಹೌದು ಎಂಬುದು. ಕೇವಲ ಆ ಮರದ ಕೆಳಗೆ ವಾಸಿಸುತ್ತಿರುವವನಿಗೆ ಮಾತ್ರ ಗೊತ್ತಿರುತ್ತದೆ, ಗೋಸುಂಬೆ ವಿವಿಧ ಬಣ್ಣಗಳನ್ನು ಧರಿಸುತ್ತದೆ ಮತ್ತು ಕೆಲವು ವೇಳೆ ಅದಕ್ಕೆ ಯಾವ ಬಣ್ಣವೂ ಇರದು ಎಂಬುದು.

❁ ಕೃಷ್ಣನ ಅಥವಾ ಕಾಳಿಯ ವಿಗ್ರಹ ಮೂರುವರೆ ಮೊಳ ಮಾತ್ರ ಇದೆಯಲ್ಲ ಏಕೆ ಗೊತ್ತೆ? ಸೂರ್ಯ ದೂರದಲ್ಲಿರುವುದರಿಂದ ಚಿಕ್ಕದಾಗಿ ಕಾಣುತ್ತಾನೆ. ಹತ್ತಿರ ಹೋಗಿ ನೋಡು, ಆತ ಎಷ್ಟೊಂದು ದೊಡ್ಡವನು, ಗ್ರಹಿಸಲೇ ಸಾಧ್ಯವಾಗುವುದಿಲ್ಲ. ಮತ್ತೆ ನೋಡು, ಕಾಳಿಯ ಮತ್ತು ಕೃಷ್ಣನ ವಿಗ್ರಹ ಕಪ್ಪಾಗಿವೆಯಲ್ಲ ಏಕೆ? ಅದಕ್ಕೂ ಕಾರಣ, ದೂರವೇ. ಉದಾಹರಣೆಗೆ ಸಮುದ್ರದ ನೀರು ಅದು ದೂರದಿಂದ ಹಸುರು, ನೀಲಿ ಅಥವಾ ಕಪ್ಪು ಬಣ್ಣದ್ದಾಗಿ ಕಾಣಿಸಿಕೊಳ್ಳುತ್ತದೆ. ಹತ್ತಿರ ಹೋಗಿ ಕೈಯಲ್ಲಿ ಒಂದು ಸ್ವಲ್ಪ ನೀರು ತೆಗೆದುಕೊಂಡು ನೋಡು. ಅದಕ್ಕೆ ಯಾವ ಬಣ್ಣವೂ ಇಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ.

❁ ನಾವು ಭಗವಂತನನ್ನು ನೋಡಬಹುದು. ಆತ ಅವಾಙ್ಮನಸಗೋಚರ ಎಂಬುದಾಗಿ ವೇದದಲ್ಲಿ ಹೇಳಿದೆ. ಇದರ ಅರ್ಥ ವಿಷಯಾಸಕ್ತ ಮನಸ್ಸಿಗೆ ಅಗೋಚರ ಎಂಬುದಾಗಿ. ವೈಷ್ಣವಚರಣ ಹೇಳುತ್ತಿದ್ದ: 'ಆತ ಶುದ್ಧ ಬುದ್ಧಿಗೆ ಗೋಚರ' ಎಂಬುದಾಗಿ. ಆದ್ದರಿಂದಲೇ ಸಾಧುಸಂಗ, ಪ್ರಾರ್ಥನೆ, ಗುರುವಿನಿಂದ ಉಪದೇಶ – ಇವುಗಳೆಲ್ಲದರ ಆವಶ್ಯಕತೆ ಇರುವುದು. ಆಗ ಮಾತ್ರವೇ ಚಿತ್ತಶುದ್ಧಿ ಉಂಟಾಗುತ್ತದೆ. ಆಗ ಮಾತ್ರವೇ ಆತನ ದರ್ಶನ ದೊರೆಯುತ್ತದೆ. ಬಗ್ಗಡದ ನೀರಿಗೆ ಶುದ್ಧೀಕರಣ ವಸ್ತುವನ್ನು ಹಾಕಿದರೆ ಆಗ ಅದು ಶುದ್ಧವಾಗುತ್ತದೆ. ಆಗ ಅದರಲ್ಲಿ ಮುಖ ಕಾಣುತ್ತದೆ. ಕೊಳಕಾಗಿರುವ ಕನ್ನಡಿಯಲ್ಲಿ ಮುಖ ನೋಡಿಕೊಳ್ಳಲಾಗುವುದಿಲ್ಲ.

❁ ಅಖಂಡ ಸಚ್ಚಿದಾನಂದನನ್ನು ಏನು ಎಲ್ಲರೂ ಗ್ರಹಿಸಬಲ್ಲರೆ? ಆದರೆ ಯಾರು ನಿತ್ಯವನ್ನು ಮುಟ್ಟಿದ ನಂತರ ವಿಲಾಸಕ್ಕಾಗಿ ಲೀಲೆಯಲ್ಲಿ ಇರುತ್ತಾರೋ ಅವರದೇ ಪಕ್ವ ಭಕ್ತಿ. ಇಂಗ್ಲೆಂಡಿಗೆ ಹೋಗಿ ರಾಣಿಯನ್ನು ನೋಡಿ ಬಂದವರು ಮಾತ್ರವೇ ಆಕೆಯ ನಡೆನುಡಿ ರೀತಿ ನೀತಿಗಳನ್ನು ವರ್ಣಿಸಬಲ್ಲರು. ಆಗ ಮಾತ್ರವೇ ಅವರ ವರ್ಣನೆ ಯಥಾರ್ಥವಾಗಿರುತ್ತದೆ. ಭಾರದ್ವಾಜಾದಿ ಋಷಿಗಳು ರಾಮನನ್ನು ಸ್ತೋತ್ರ ಮಾಡಿದರು: 'ಹೇ ರಾಮ, ನೀನೇ ಅಖಂಡ ಸಚ್ಚಿದಾನಂದ. ನೀನು ನಮ್ಮ ಹತ್ತಿರಕ್ಕೆ ಮನುಷ್ಯ ರೂಪ ಧರಿಸಿ ಬಂದಿದ್ದೀಯೆ. ನೀನೇ ನಿನ್ನನ್ನು ನಿನ್ನ ಮಾಯೆಯಿಂದ ಮುಚ್ಚಿಕೊಂಡಿರುವುದರಿಂದ ಮನುಷ್ಯನಾಗಿ ಕಾಣಬರುತ್ತಿದ್ದೀಯೆ.' ಈ ಋಷಿಗಳು ರಾಮನ ಪರಮಭಕ್ತರು. ಇವರದು ಪಕ್ವ ಭಕ್ತಿ.

❁ ಭಗವಂತ ಕೇವಲ ಸಾಕಾರ ಅಂತ ಹೇಳಿಬಿಟ್ಟರೆ ಹೇಗಾದೀತು? ಭಗವಂತ ಶ್ರೀಕೃಷ್ಣನ ರೂಪದಲ್ಲಿ ಬಂದಿದ್ದ ಹಾಗೆ, ಮನುಷ್ಯ ದೇಹಧಾರಣೆ ಮಾಡಿಕೊಂಡು ಬರುತ್ತಾನೆ ಎಂಬುದು ಖಂಡಿತ ಸತ್ಯ; ವಿವಿಧ ರೂಪಗಳನ್ನು ಧರಿಸಿ ಭಕ್ತರಿಗೆ ಗೋಚರನಾಗುತ್ತಾನೆ ಎಂಬುದೂ ಸತ್ಯ; ಆದರೆ ಆತ ನಿರಾಕಾರ ಎಂಬುದೂ ಸತ್ಯ; ಆತ ಅಖಂಡ ಸಚ್ಚಿದಾನಂದ ಬ್ರಹ್ಮ. ವೇದದಲ್ಲಿ ಹೇಳಿದೆ, ಆತ ಸಾಕಾರ ನಿರಾಕಾರ ಎರಡೂ ಎಂದು. ಅದರಲ್ಲಿ ಹೇಳಿದೆ, ಆತ ಸಗುಣನೂ ಹೌದು, ನಿರ್ಗುಣನೂ ಹೌದು ಎಂದು.

**'ಶ್ರೀರಾಮಕೃಷ್ಣ ವಚನವೇದ'**ದಿಂದ